ವಾರದ ಪತ್ರ

## ಯಾವ ಯಾವ ಗೌರಿಯರು...

ಹಲವು ವರ್ಷಗಳಿಂದ ನಮಗೆ ತಲೆಚಿಟ್ಟು ಹಿಡಿಸುವ ಪುಟ್ಟ ಗೌರಿ ಮದುವೆ ಇನ್ನೇನು ಮುಗಿಯುತ್ತದೆ ಎಂಬ ಸಂಭ್ರಮದಲ್ಲಿರುವಾಗ ಪುಟ್ಟಗೌರಿ ಹೋಗಿ ಅವಳ ಸ್ಥಾನದಲ್ಲಿ ಮಂಗಳಗೌರಿ ಬಂದಿದ್ದಾಳೆ. ಇನ್ನು 'ಸ್ವರ್ಣಗೌರಿ', 'ಚೈತ್ರಗೌರಿ' ಬರಬೇಕಾಗಿರುವುದು ಬಾಕಿ ಇದೆ. ಇನ್ನೆಷ್ಟು ಗೌರಿಯರು ಬರಬೇಕೋ ಒಟ್ಟಿನಲ್ಲಿ ಈ ಗೌರಿಯವರಿಂದ ನಮಗೆ ಮುಕ್ತಿಯೇ ಇಲ್ಲವೆಂದೆನಿಸುತ್ತದೆ. ಆದರೆ ಸಂತೋಷದ ಒಂದು ವಿಷಯವೇನೆಂದರೆ 'ಅಗ್ನಿಸಾಕ್ಷಿ' ಮುಗಿಯುವ ಲಕ್ಷಣಗಳು ಕಂಡು ಬರುತ್ತಿದೆ.

'ರಾಧಾ ರಮಣ'ದ ಸಿತಾರಾಳ ಅಟ್ಟಹಾಸಕ್ಕೂ ಕಡಿವಾಣ ಬೀಳುವಂತೆ ಕಾಣುತ್ತಿದೆ. ಆದರೆ ತನ್ನ ಮನಸ್ಸಿನ ಮಾತನ್ನು ಕೊನೆಯವರೆಗೂ ತನ್ನ ಕುಟುಂಬದ ಎದುರು ಹೇಳಿಕೊಳ್ಳದ ದಿನಕರನ ಅಸಹಾಯಕತೆಯ ಬಗ್ಗೆ ಅಯ್ಯೋ ಅನಿಸುತ್ತದೆ.

'ಪದ್ಮಾವತಿ'ಯಲ್ಲಿ ಪ್ರಸನ್ನನ ಬದಲಾದ ವರ್ತನೆ ಕುಟುಂಬದ ಇತರ ಸದಸ್ಯರಿಗೆ ಬಾರದಿರಬಹುದು. ಆದರೆ ಹೆಂಡತಿಯಾದ ಸಾಧನಾಳ ಅರಿವಿಗೆ ಬಾರದಿರುವುದು ವಿಚಿತ್ರವೆನಿಸುತ್ತದೆ.

—ಮುರಳೀಧರ ಕುಲಕರ್ಣಿ, ಬೀದರ್

## ಹುಚ್ಚರ ಕುಟುಂಬ

ಝೀ ಕನ್ನಡದ 'ಪಾರು' ಆನೆ ನಡೆದ್ದಿದ್ದೆ ದಾರಿ ಎಂಬಂತೆ ಸಾಗುತ್ತಿದೆ. ಅರಸನಕೋಟೆ ಅಖಿಲಾಂಡೇಶ್ವರಿ ತನ್ನ ದೊಡ್ಡ ಕಣ್ಣುಗಳನ್ನು ಬಿಡುತ್ತಾ ತಾನು ಹೇಳಿದ್ದೇ ವೇದವಾಕ್ಯ ಎಂದು ಗಂಡ ಹಾಗೂ ಮೊದಲನೇ ಮಗನ ಜೊತೆಗೂಡಿ ಮಿಕ್ಕವರು ತನ್ನ ಕಾಲುಕಸಕ್ಕೆ ಸಮ ಎಂಬ ರೀತಿಯಲ್ಲಿ ಎರಡನೇ ಮಗನ ಮನಸನ್ನು ಅರ್ಥಮಾಡಿಕೊಳ್ಳದೇ ತನ್ನ ಮೊದಲನೇ ಮಗನಿಗೆ 35 ಪರ್ಸೆಂಟ್ ಹಾಗೂ ಮನೆಯ ಸೊಸೆಯೂ ಆಗದ ದಿಶಾಗೆ 65 ಪರ್ಸೆಂಟ್ ಆಸ್ತಿ ಬರೆಯುವ ಮೂಲಕ ಹುಚ್ಚುತನವನ್ನು ಪ್ರದರ್ಶಿಸಿದ್ದಾಳೆ ಎಂದರೆ ತಪ್ಪಾಗಲಾರದು. ತನ್ನ ಎದುರು ಯಾರು ಅತಿರೇಕದಿಂದ ವರ್ತಿಸಿದರೂ ಅವರನ್ನು ಖಂಡಿಸುವ ಈ ಶ್ರೀಮಂತಿಕೆಯ ಹೆಣ್ಣಿಗೆ ದಿಶಾಳ ಸೊಕ್ಕಿನ, ಗರ್ವದ ಮಾತು ನಡವಳಿಕೆ ಅರ್ಥವಾಗದೇ ಇರುವುದು ಪ್ರಪಂಚದ ಎಂಟನೇ ಅದ್ಭುತವೇ ಸರಿ. ಇವಳ ಬೆಪ್ಪುತನದ ಶ್ರೀಮಂತಿಕೆಗೆ ಏನು ಅನ್ನಬೇಕೆಂಬುದು ನಿಜಕ್ಕೂ ತಿಳಿಯದ ರಹಸ್ಯ.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಮತ್ತೆ ಸರಿಗಮಪ

ಝೀ ವಾಹಿನಿಯಲ್ಲಿ ಪುನಃ ಆರಂಭವಾಗಿರುವ ಹಾಡುಗಾರಿಕೆಯ ಸರಿಗಮಪ ರಿಯಾಲಿಟಿ ಶೋನಲ್ಲಿ ಮೂರೂವರೆ ವರ್ಷದ ಬಾಲಕಿ ಭಾಗವಹಿಸಿರುವುದು ಪೋಷಕರಿಗೆ ಮಾತ್ರವಲ್ಲ, ವೀಕ್ಷಕರಿಗೂ ಹೆಮ್ಮೆಯ ವಿಚಾರ. ಆದರೆ, ಈ ಕಾರ್ಯಕ್ರಮ ಸ್ಪರ್ಧಾತ್ಮಕವಾಗಿರುವ ಕಾರಣಕ್ಕೆ ಹಾಗೂ ಅನೇಕ ವಯಸ್ಕ ಸ್ಪರ್ಧಿಗಳ ಜೊತೆ ಪೈಪೋಟಿಗೆ ಇಳಿದಾಗ ಈ ತೊದಲು ನುಡಿಯಲ್ಲಿ ಹಾಡುವ ಪುಟ್ಟ ಮಕ್ಕಳು ಆಡಿಶನ್ ನಲ್ಲಿ ಆಯ್ಕೆಯಾದರೂ ಮುಂದಿನ ಸುತ್ತುಗಳಲ್ಲಿ ಮುನ್ನಡೆ ಸಾಧಿಸುವುದು ಸುಲಭದ ಮಾತಾಗದು.

ಸ್ಪರ್ಧೆಯಿಂದ ನಿರ್ಗಮಿಸಬೇಕಾದ ಸಂದರ್ಭ ಅಮಾಯಕ ಮಕ್ಕಳ ಮೃದು ಮನಸ್ಸಿನ ಮೇಲೆ ಅನಿರೀಕ್ಷಿತ ಮಾನಸಿಕ ಕೆಟ್ಟ ಪರಿಣಾಮ ಉಂಟು ಮಾಡುವ ಸಾಧ್ಯತೆಯಿದೆ. ಸ್ಪರ್ಧೆಯ ಪೈಪೋಟಿಯ ನೆಪದಲ್ಲಿ ಮಕ್ಕಳು ತಮ್ಮ ಬಾಲ್ಯದ ಸುದಿನಗಳಿಂದ ವಂಚಿತರಾಗಬಹುದು. ಈ ವಾಸ್ತವಾಂಶವನ್ನು ಅರಿತು ಸ್ಪರ್ಧಿಗಳ ಆಯ್ಕೆಯಲ್ಲಿ ಎಚ್ಚರಿಕೆ ವಹಿಸುವುದು ಸೂಕ್ತ.

—ಸುಶೀಲಾ ಬಿ.ಆರ್. ರಾಮಣ್ಣ ಬೆಂಗಳೂರು

## ಎಲ್ಲಾ ಸರಿ, ಆದರೆ...

ಝೀ ವಾಹಿನಿಯಲ್ಲಿ ಶನಿವಾರ ಮತ್ತು ರವಿವಾರ ಪ್ರಸ್ತುತಗೊಳ್ಳುತ್ತಿರುವ ಡ್ರಾಮಾ ಜೂನಿಯರ್ಸ್ ಕಾರ್ಯಕ್ರಮ ಸೊಗಸಾಗಿ ಬರುತ್ತಿದೆ. ಪೌರಾಣಿಕ ಕಥೆ, ಚಾರಿತ್ರಿಕವಾಗಿ ಶರಣರು, ದಾಸರು, ಸಾಧು ಸಂತರ ಕಥಾನಕಗಳಲ್ಲಿ ಮಕ್ಕಳ ಅಸಾಧಾರಣ ಪ್ರತಿಭೆ ಅನಾವರಣಗೊಳ್ಳುತ್ತಿರುವುದು ಅದ್ಭುತವಾಗಿದೆ.

ಹಾಗೆಯೇ ಮಹಾಸಾಧಕರನ್ನು ಗುರುತಿಸಿ, ಅವರ ಬದುಕಿಗೆ ರಂಗರೂಪ ನೀಡುತ್ತಿರುವುದು ಶ್ಲಾಘನೀಯ. ಆದರೆ ಸಾಮಾಜಿಕ ವಿಷಯ ವಸ್ತುವಿನ ನಿರೂಪಣೆಯಲ್ಲಿ ಮುಗ್ಧ ಮಕ್ಕಳ ಮೃದುಮನಸ್ಸಿನಲ್ಲಿ ದಾಂಪತ್ಯ, ಪ್ರಣಯ, ವಿರಸ, ಜಗಳ ಕೆಟ್ಟ ಅಭಿಪ್ರಾಯ ಮೂಡಿಸುವ ಸಾಧ್ಯತೆ ಇದೆ.

—ಪೂರ್ಣಿಮಾ ಮೂರ್ತಿ

## ಸಂಬಂಧ ಹೇಗೆ?

'ಮಗಳು ಜಾನಕಿ'ಯಲ್ಲಿ, ಸೋದರತ್ತೆಯ ಗಂಡನಾದ್ದರಿಂದ ಭಾರ್ಗಿಯು ದೇವಯಾನಿಗೆ ಸೋದರಮಾವನಾಗುತ್ತಾನೆ ಎನ್ನುತ್ತಾರೆ ಸಿಎಸ್ಪಿ. ಆದರೆ ಸೋದರಮಾವನೆಂದರೆ ತಾಯಿಯ ಅಣ್ಣ ಅಥವಾ ತಮ್ಮ, ಸೋದರತ್ತೆಯ ಗಂಡ ಸೋದರಮಾವನಲ್ಲ.

—ಜಿ. ಮೃತ್ಯುಂಜಯ, ಬೆಂಗಳೂರು

## ಬಿಚ್ಚಿಟ್ಟ ಆಭರಣಗಳ ಧಾರಣೆಯಾವಾಗ

ಕಲರ್ಸ್ ಕನ್ನಡದ 'ಅಗ್ನಿ ಸಾಕ್ಷಿ'ಯ ಅಂಜಲಿ ಮದುವೆ ನಿಲ್ಲುತ್ತದೆ. ಇದೇ ಸಂದರ್ಭದಲ್ಲಿ ಚಂದ್ರಿಕಾ ಪಾತ್ರದಲ್ಲಿರುವವರು ಅಳುತ್ತ ತಾವು ಹಾಕಿಕೊಂಡಿರುವ ಆಭರಣಗಳನ್ನು ಕೆಳಗೆ ಬಿಸಾಕುತ್ತಾರೆ. ಆದರೆ ಮುಂದಿನ ಸನ್ನಿವೇಶದಲ್ಲಿ ಅವರು ಕಾಣಿಸಿಕೊಂಡಾಗ ಆಭರಣಗಳನ್ನು ಧರಿಸಿರುತ್ತಾರೆ. ಕಲ್ಯಾಣ ಮಂಟಪದಿಂದ ತಪ್ಪಿಸಿಕೊಂಡು ಹೋಗುತ್ತಿರುವ ಅವರು ತಮ್ಮ ಆಭರಣಗಳನ್ನು ಮತ್ತೆ ಧರಿಸಿಕೊಂಡಿದ್ದು ಯಾವಾಗ ಎನ್ನುವ ಗೊಂದಲ ವೀಕ್ಷಕರಲ್ಲಿ ಮೂಡುತ್ತಿದೆ.

—ನಿವೇದಿತಾ ಸು. ಸೋಲಾಪುರ ವಿಜಯಪುರ

## ಅತಿಯಾಗದಿರಲಿ

ಮಜಾ ಟಾಕೀಸ್ ಸಾಕಷ್ಟು ಜನಪ್ರಿಯತೆ ಗಳಿಸಿರುವ ಕಾರ್ಯಕ್ರಮ. ಇತ್ತೀಚೆಗೆ 'ಜಿನ್ನು' (ಚಿಂತಾಮಣಿ ನಾಗರತ್ನ) ಪಾತ್ರ ಪರಿಚಯಿಸಿದ್ದಾರೆ. ಅವರ ಕಿರಿಕಿರಿ ಮೂಡಿಸುವ ಅತಿ ಅಭಿನಯ ಬೇಸರ ತರಿಸುತ್ತದೆ. ಈ ಪಾತ್ರವನ್ನು ತೆಗೆದು ಹಾಕುವುದು 'ಮಜಾ' ವೇದಿಕೆಗೆ ಒಳ್ಳೆಯದು.

—ಉಷಾ ಸೋಗಲ್, ತುರಹಳ್ಳಿ

## ಕಥೆಯಲ್ಲಿ 'ಮಹಿಮೆ'

ಝೀ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ಮಹಾದೇವಿ' ಧಾರಾವಾಹಿಯಲ್ಲಿ ಹಿರಣ್ಮಯಿ ನಾದಸ್ವರ ನುಡಿಸುವಾಗ ಚೇಳು ಕಚ್ಚಿ ಆಸ್ಪತ್ರೆಗೆ ಸೇರಿಸಿದಾಗ, ಡಾಕ್ಟರ್ ಅವಳ ಸ್ಥಿತಿ ಗಂಭೀರವಾಗಿದೆಯೆಂದು ಹೇಳುತ್ತಾರೆ. ಆಗ ಮಾಸ್ಕ್ ಹಾಕಿದ ಹಿರಣ್ಮಯಿಯ ಬಳಿ ಅವರ ತಂದೆ ಕುಳಿತು ನಾದಸ್ವರ ನುಡಿಸಿದಾಗ, ಅದರ ಧ್ವನಿ ಕೇಳಿ ಹಿರಣ್ಮಯಿ ಎಚ್ಚರಗೊಂಡು ಚೇತರಿಸಿಕೊಳ್ಳುತ್ತಾಳೆ.

ನಂತರದ ದೃಶ್ಯದಲ್ಲಿ ದೇವಸ್ಥಾನದಲ್ಲಿ ಶಿವು ಜೊತೆ ನಾದಸ್ವರ ನುಡಿಸುತ್ತಾಳೆ. ಮಾಸ್ಕ್ ಹಾಕಿ ಮಲಗಿದ ಹಿರಣ್ಮಯಿ ಬಳಿ ತಂದೆ ನಾದಸ್ವರ ನುಡಿಸುವಾಗ ರೋಗಿಗೆ ತೊಂದರೆಯಾಗುವುದಾಗಿ ಯಾವ ಡಾಕ್ಟರ್, ನರ್ಸ್ ಹೇಳಲು ಬರುವುದಿಲ್ಲ. ಅವಳನ್ನು ಡಿಸ್‌ಚಾರ್ಜ್ ಮಾಡುವುದನ್ನೂ ಡಾಕ್ಟರ್ ಹೇಳುವುದಿಲ್ಲ. ನಂತರ ದೃಶ್ಯದಲ್ಲಿ ಆರೋಗ್ಯವಂತಳಾಗಿ ದೇವಾಲಯದ ಮುಂದೆ ಹಿರಣ್ಮಯಿ ನಾದಸ್ವರ ನುಡಿಸುವುದು ಎಲ್ಲ ದೇವಿ ಮಹಿಮೆ ಇರಬಹುದೆ?

—ವಿಭಾ ಮುರಳೀಧರ್, ತುಮಕೂರು